## ಸೋರೆಕಾಯಿ ಇಡ್ಲಿ

ಏನೇನು ಬೇಕು ?

ಸಿಪ್ಪೆತೆಗೆದ ಸೋರೆಕಾಯಿ ತುರಿ  ಎರಡು ಕಪ್

ಅಕ್ಕಿ ರವೆ ಒಂದು ಕಪ್

ಮೊಸರು ಅರ್ಧ ಕಪ್

ಕಾಳುಮೆಣಸು ತರಿ ಅರ್ಧ ಚಮಚ

ಮಾಡೋದು ಹೇಗೆ ?

ಮೇಲಿನದ್ದೆಲ್ಲವನ್ನೂ ಸೇರಿಸಿ ಗೋಡಂಬಿ , ಕಡಲೆಬೇಳೆ , ಉದ್ದಿನಬೇಳೆ, ಸಾಸಿವೆ, ಇಂಗು, ಹಸಿಮೆಣಸು, ಕರಿಬೇವಿನ ಒಗ್ಗರಣೆ ಹಾಕಿ ಉಪ್ಪು ಬೆರೆಸಿ ಕಲಸಿ. ಇನ್ನೋ ಉಪ್ಪು ಹಾಕುವುದಿದ್ದಲ್ಲಿ ಕಡೆಯಲ್ಲಿ ಬೆರೆಸಿ ತಕ್ಷಣ ಹಬೆಯಲ್ಲಿ ಹದಿನೈದರಿಂದ ಇಪ್ಪತ್ತು ನಿಮಿಷ ಬೇಯಿಸಬೇಕು.





## ಕಾಂಚೀಪುರಂ ಇಡ್ಲಿ

ಏನೇನು ಬೇಕು?

ರಾ ರೈಸ್ ಒಂದು ಕಪ್

ಇಡ್ಲಿ ಅಕ್ಕಿ ಒಂದು ಕಪ್

ಉದ್ದಿನ ಬೇಳೆ ಒಂದು ಕಪ್

ಮೆಂತೆ  ಅರ್ಧ ಚಮಚ

ಒಗ್ಗರಣೆಗೆ ಎರಡು ದೊಡ್ಡ ಚಮಚ  ಕಾದ ಎಳ್ಳೆಣ್ಣೆಗೆ ಸಾಸಿವೆ, ಜೀರಿಗೆ, ಜಜ್ಜಿದ ಶುಂಠಿ, ಕಾಳುಮೆಣಸು  ಒಂದು ಚಮಚ, ಕರಿಬೇವು, ಇಂಗು

ಮಾಡೋದು ಹೇಗೆ ?

ಅಕ್ಕಿಯನ್ನು ನಾಲ್ಕರಿಂದ ಐದು ತಾಸು ನೆನೆ ಇಡಿ. ನಂತರ ಸ್ವಲ್ಪ ತರಿತರಿಯಾಗಿ ರುಬ್ಬಿ. ಆರೇಳು ತಾಸು ಬಿಡಿ. ನಂತರ ಇದಕ್ಕೆ ಒಗ್ಗರಣೆ ಸೇರಿಸಬೇಕು. ಅರ್ಧ ಕಪ್ ಮೊಸರು, ರುಚಿಗೆ ಉಪ್ಪು ಬೆರೆಸಿ ಉದ್ದದ ಲೋಟ ಅಥವಾ ಕಪ್ ನಲ್ಲಿ ಹಾಕಿ ಹಬೆಯಲ್ಲಿ ಹದಿನೈದು ನಿಮಿಷ ಬೇಯಿಸಿ.


